ಶ್ರೀ ಕೆ. ಬಿ. ಪುಟ್ಟಲಿಂಗಯ್ಯ.—ಇದನ್ನು ಯಾವಾಗ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ವಹಿಸಿ ಕೊಂಡರು ಎಂಬುದು ಇದೆಯೆ ? ಮತ್ತು ಈ ಜಮೀನಿನಲ್ಲಿ ೧೭ ಗುಡಿಸಲುಗಳು ಇವೆ ಎಂದು ಹೇಳುತ್ತೀರಿ. ನನಗೆ ಗೊತ್ತಿರುವ ವರ್ತಮಾನದ ಪ್ರಕಾರ ಇನ್ನೂ ಹೆಚ್ಚು ಕುಟುಂಬಗಳು ಇವೆ ಎಂದೇ ಗೊತ್ತಾಗಿದೆ. ಅವರು ಎಷ್ಟು ಜಮೀನನ್ನು ಆಕ್ರಮಿಸಿಕೊಂಡಿದ್ದಾರೆ ? ಅವರು ಸಾಗುವಳಿ ಮಾಡಿರತಕ್ಕ ಜಮೀನನ್ನು ಅವರಿಗೇ ಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಸರ್ಕಾರ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದೆ. ಅದರ ಪ್ರಕಾರ ಅರಣ್ಯ ಪ್ರದೇಶದಲ್ಲಿ ಭೂಮಿ ಇಲ್ಲದೇ ಇರುವವರು ಅರಣ್ಯ ಜಮೀನನ್ನು ಒತ್ತುವರಿ ಮಾಡಿ ಕೊಂಡಿದ್ದರೆ ಆ ಜಮೀನನ್ನು ಅವರಿಗೇ ಕೊಡುತ್ತೇವೆ. ಮತ್ತು ಜಮೀನು ಇಲ್ಲದೆ ಅವರು ಬೇರೆ ಕಡೆ ಒತ್ತುವರಿ ಮಾಡಿದ್ದ ಪಕ್ಷದಲ್ಲಿ ಅದನೂ ಅವರಿಗೆ ಖಾಯಂ ಮಾಡುತ್ತೇವೆ. ಅಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳಲು ಹೆಚ್ಚು ಜನರು ಭೂಮಿಯನ್ನು ಆಕ್ರಮಿಸಿಕೊಂಡಿದ್ದರೆ ಅದನ್ನೂ ಖಾಯಮ್ ಮಾಡುತ್ತೇವೆ.

ಅಧ್ಯಕ್ಷರು.—ಶ್ರೀ ನಾರಾಯಣ ದಾಸ್‌ರವರ ಪರವಾಗಿ ಶ್ರೀ ಕರಿಬಸವನಗೌಡ ಅವರು ಪ್ರಶ್ನೆ ನಂ. ೧೨೪೦ ಕೇಳಬಹುದು.

Hospital building at Harapanahalli.

1240 SRI N. KARIBASAVANA GOWDA (Hadagali) [On behalf of SRI D. NARAYANA DAS (Harapanahalli)];—Will the Minister for Health and Family Welfare be pleased to state :—

(a) whether the Public have represented for the grant of 30 bed hospital building at Harapanahalli ;

(b) if so, the action taken by the Government in this regard ?

SRI S. M. YAHYA (Minister for Finance) [On behalf of SRI M. MALLAPPA (Minister for Health and Family Welfare)]:—

(a) Yes.

(b) the Taluk Development Board, Harapanahalli has been repeatedly requested to pay their contribution. There is no response to this so far. It will be considered after receipt of contribution.

ಶ್ರೀ ಎನ್. ಕರಿಬಸವನಗೌಡ.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಹರಪನಹಳ್ಳಿಯ ತಾಲ್ಲೂಕು ಅಭಿವೃದ್ಧಿ ಮಂಡಲಿಯವರನ್ನು ಆಸ್ಪತ್ರೆ ಕಟ್ಟಡ ಸಂಬಂಧಪಟ್ಟ ಪಂತಿಗೆಯನ್ನು ಪಾವತಿ ಮಾಡಬೇಕೆಂದು ಕೇಳಿದ್ದೇವೆಂದು ಹೇಳಿದ್ದೀರಿ. ಎಷ್ಟು ಸಾರಿ ಕೇಳಿದ್ದೀರಿ ? ಯಾವ ತಾಲ್ಲೂಕಂ ಬೋರ್ಡಿನವರನ್ನು ಕೇಳಿದ್ದೀರಿ ?

† ಶ್ರೀ ಎಸ್. ಎಂ. ಯಾಹ್ಯಾ.—ಹರಪನಹಳ್ಳಿಯಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆ ಕಟ್ಟಡವನ್ನು ಕಟ್ಟುವುದಕ್ಕೋಸ್ಕರ ಆ ತಾಲ್ಲೂಕು ಬೋರ್ಡಿನವರು ಶೇಕಡ ೫೦ರಷ್ಟು ಕಟ್ಟಡದ ಹಣವನ್ನು ಕೊಡ ಬೇಕಾಗುತ್ತದೆ. ಈ ಆಸ್ಪತ್ರೆಯ ಕಟ್ಟಡಕ್ಕೆ ೩ ಲಕ್ಷ ರೂಪಾಯಿ ಬೇಕಾಗುತ್ತದೆ. ಒಂದೂವರೆ ಲಕ್ಷ ರೂಪಾಯಿಯನ್ನು ತಾಲ್ಲೂಕು ಬೋರ್ಡಿನವರು ಕೊಟ್ಟರೆ ಆ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಸಾಧ್ಯ.

ಶ್ರೀ ಎನ್. ಕರಿಬಸವನಗೌಡ.—ಈ ರೀತಿ ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ಹರಪನಹಳ್ಳಿ ತಾಲ್ಲೂಕಂ ಬೋರ್ಡಿನವರನ್ನು ಕೇಳಿದ್ದೀರಾ ಅಥವಾ ಬೇರೆ ಇನಾವುದಾದರೂ ತಾಲ್ಲೂಕು ಬೋರ್ಡಿನವರ ಹಣವನ್ನು ಕೇಳಿದ್ದೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಇಲ್ಲಿ ಪ್ರಶ್ನೆ ಇರುವುದು ಹರಪ್ಪನಹಳ್ಳಿಗೆ ಸಂಬಂಧಪಟ್ಟದ್ದು. ಆದ್ದರಿಂದ ಆ ತಾಲ್ಲೂಕು ಬೋರ್ಡಿನವರಿಗೆ ಹಣವನ್ನು ಕೇಳಿದ್ದೇವೆ. ಅವರು ತಮ್ಮ ಭಾಗದ ಅರ್ಧ ಹಣವನ್ನು ಕೊಟ್ಟರೆ ಅಲ್ಲಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಸಾಧ್ಯ.

ಶ್ರೀ ಎನ್. ಕರಿಬಸವನಗೌಡ.—ಆ ತಾಲ್ಲೂಕು ಬೋರ್ಡಿಗೆ ಹಣದ ಕೊರತೆ ಇದ್ದು, ಒಂದೂವರೆ ಲಕ್ಷ ರೂಪಾಯಿಯನ್ನು ಕೊಡುವುದಕ್ಕೆ ಆಗದ ಪಕ್ಷದಲ್ಲಿ ಅವರು ೭೫,೦೦೦ ರೂಪಾಯಿಗಳನ್ನು ಕೊಡುತ್ತೇವೆಂದರೆ ಆ ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ನಿಯಮದ ಪ್ರಕಾರ ಹಾಗಿದೆ. ಈ ನಿಯಮದ ಪ್ರಕಾರ ನಡೆಯುವುದಾದರೆ ಕೆಲವು ಕಡೆ ಅನ್ಯಾಯಗಳಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಬಡ ತಾಲ್ಲೂಕು ಬೋರ್ಡುಗಳು ಇರುತ್ತವೆ. ಇದಕ್ಕಾಗಿ ನಾನು ಒಂದು ಸಲ ನಾನು ನನ್ನ ಚೇಂಬರ್‌ನಲ್ಲಿ ಆರೋಗ್ಯಮಂತ್ರಿಗಳನ್ನು ಕರೆಸಿ ಇದರ ಬಗ್ಗೆ ಮಾತನಾಡಿದ್ದೇನೆ. ಈ ಪದ್ಧತಿಯನ್ನು ತೆಗೆದು ಹಾಕಬೇಕು. ಈಗಿರತಕ್ಕ ನಿಯಮಗಳನ್ನು ಸಡಿಲಿಸದೇ ಹೋದರೆ ಕೆಲವು ಹಿಂದುಳಿದ ಭಾಗಗಳಿಗೆ ಆಸ್ಪತ್ರೆ ಸೌಕರ್ಯ ಒದಗಿಸುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಹಣಕಾಸಿನ ತೊಂದರೆಯಿಂದ ತಾಲ್ಲೂಕು ಬೋರ್ಡಿನವರು ತಮ್ಮ ಭಾಗದ ವಂತಿಕೆಯನ್ನು ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಆ ಬಗ್ಗೆ ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ನಾನು ಒಂದು ಸಲಹೆಯನ್ನು ಆರೋಗ್ಯ ಇಲಾಖೆಗೆ ಕೊಟ್ಟಿದ್ದೇನೆ. ಅದನ್ನು ವಿಚಾರ ಮಾಡುತ್ತಿದ್ದೇವೆ.

SRI N. KARIBASAVANNA GOWDA.—Sir, on behalf of the Hon. Health Minister, the Hon.Finance Minister is answering this question. It is a very good opportunity for me to request him on behalf of the Hadagali and Harapanahalli Taluka Boards to make it 25% contribution.

ಶ್ರೀ ಎಸ್.ಎಂ. ಯಾಹ್ಯಾ.—ಕಾನೂನು ಅಥವಾ ನಿಯಮ ಬದಲಾವಣೆಯಾಗದೆ ಮಾಡುವುದಕ್ಕೆ ಸಾಧ್ಯವಿಲ್ಲ. ಬದಲಾವಣೆ ಮಾಡುವ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY

(but not taken up)

Youth Seminars Conducted fn Gulbarga Division

275. SRI L.S. DESAI (Yelburga).—Will the Minister of State for Information and Youth Services be pleased to State.—

(a) the number of Youth Seminars conducted at Divisional Level in Gulbarga Division during the past two years:

(b) whether Government intend to organise such a seminar during the current financial year?

SRI K.H. SRINIVAS (Minister of State for Information and Youth Services).—

(a) Two.

(b) Yes.